**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ5503/2022**

ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

ಹೆಸರು ಃ ಬಾಬು

ತಂದೆಃಗಂಡ ಃ ಗಂಗಯ್ಯ

ವಯಸ್ಸು ಃ 70 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ ಃ ಮಡಕಿ

ದಿನಾಂಕಃ 27.11.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮರು ಮುಖ್ಯ ವಿಚಾರಣೆ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-2 ರಿಂದ 11 ರವರ ಪರಿಚಯ ಇರುತ್ತದೆ. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇರುವುದಿಲ್ಲ. ಸಾಕ್ಷಿ ಈಗ ಅವರು ನೀಡಿದ ದೂರನ್ನು ತೋರಿಸಿ ಅದರಲ್ಲಿ ಇರುವ ಹೆಬ್ಬಟ್ಟಿನ ಗುರುತನ್ನು ನಿಪಿ-1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿನಾಂಕಃ **20.03.2022** ರಂದು ರಾತ್ರಿ **7.30** ಗಂಟೆಗೆ ಆರೋಪಿತರು ಲಕ್ಷ್ಮಿ ಗುಡಿಯ ಹತ್ತಿರ ಇರುವ ಸರ್ಕಾರಿ ಶಾಲೆಯ ಹತ್ತಿರ ಇರುವ ಬಸವಣ್ಣ ದೇವರ ಗುಡಿಯ ಹತ್ತಿರ ಕುಳಿತಿದ್ದಾಗ ನಾನು ಅಲ್ಲಿಗೆ ಹೋಗಿ ಕುಳಿತಾಗ **1** ನೇ ಆರೋಪಿ ಬಸವಣ್ಣ ದೇವರ ಗುಡಿಯು ನೀನು ಏಕೆ ಬಿಳಿಸಿ ಕಟ್ಟುತ್ತಿದ್ದೀಯಾ ಯಾರ ಅನುಮತಿ ತೆಗೆದುಕೊಂಡಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ ನನಗೆ ಎದೆಯ ಮೇಲಿನ ಅಂಗಿ ಹಿಡಿದು ಕೈಯಿಂದ ಕಪಾಳಕ್ಕೆ ಹಾಗೂ ಕಾಲಿನಿಂದ ಬಲಗಾಲಿನ ತೊಡೆಗೆ ಒದ್ದಿರುತ್ತಾನೆ ಎಂದರೆ ಸರಿಯಲ್ಲ ಆಗ ಚಾಸಾ-**4** ರಿಂದ **6** ರವರು ಜಗಳ ಬಿಡಿಸುವಾಗ ಚಾಸಾ-**4** ರವರಿಗೆ **1** ನೇ ಆರೋಪಿ ತಲೆ ಕೂದಲು ಹಿಡಿದು ಎಳೆದಾಡಿ, ಸೀರೆ ಹಿಡಿದು ಜಗ್ಗಾಡಿ ಅವಾಚ್ಯ ಶಬ್ದಗಳಿಂದೆ ಬೈದಿರುತ್ತಾನೆ ಎಂದರೆ ಸರಿಯಹುಲ್ಲ ಆಗ ಚಸಾ-**5, 6** ರವರಿಗೆ **2** ರಿಂದ **4** ನೇ ಆರೋಪಿತರ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-**6** ರವರಿಗೆ ಕೈಯಿಂದ ಕಪಾಳಕ್ಕೆ ಹಾುಗೂ ಬೆನ್ನೆ ಮೇಲೆ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿಯಲ್ಲ. **3** ನೇ ಆರೋಪಿ ಚಾಸಾ-**6** ರವರಿಗೆ ಸೀರೆ ಹಿಡಿದು ಜಗ್ಗಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ **4** ನೇ ಆರೋಪಿ ತಲೆ ಕೂದಲು ಹಿಡಿದು ಕೆಡವಿ **2** ನೇ ಆರೋಪಿ ಕಾಲಿನಿಂದ ಒದ್ದಿರುತಾತನೆ ಎಂದರೆ ಸೇರಿಯಲ್ಲ. ಆಗ ಚಾಸಾ-**7** ರಿಂದ **11** ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ, ನಾನು ಪೋಲಿಸರ ಎದುರು ಈ ಮೇಲೆ ಹೇಳಿದಂತೆ ದೂರು ನೀಡಿದ್ದು ಈಗ ಆರೋಪಿಗೆಳೊಂದಿಗೆ ರಾಜಿಯಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.